ಎಂ.ವಿ.ಸಿಃ 720/2024
ಪಿ.ಡಬ್ಲ್ಯೂ : 02

ದಿನಾಂಕ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-25 | ಕೇಸ್ ಶೀಟ್, |
| ನಿಪಿ-26 | ಎಕ್ಸ್ ರೇಗಳು. |

ನಿಪಿ**.13** ಮತ್ತು **14** ರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು**,** ನಿಪಿ**.13(**ಎ**)** ಮತ್ತು **14(**ಎ**)** ಎಂದು ಗುರುತಿಸಲಾಯಿತು**.**

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ಅರ್ಜಿದಾರರಿಗೆ ಯಾವುದೇ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ತೊಡೆಮೂಳೆ ಸರಿಯಾಗಿ ಜೋಡಣೆ ಆಗಿಲ್ಲ ಮತ್ತು ಅದು ಮುಂದೆ joint ಹಾಳಾಗಬಹುದು ಹಾಗಾಗಿ ಮುಂದುವರಿದ ಚಿಕಿತ್ಸೆ ಅವಶ್ಯಕತೆ ಇದೆ . ಅರ್ಜಿದಾರರಿಗೆ ಆಗಿದ್ದ ಮಾಳೆ ಮುರಿತ ಸರಿಯಾಗಿ ಜೋಡಣೆ ಆಗಿಲ್ಲ ಎಂದು ನಾನು ನನ್ನ ಮುಖ್ಯವಿಚಾರಣೆ ಯಲ್ಲಿ ಹೇಳಿರುತ್ತೇನೆ . ಅದಕ್ಕೆ ಸಂಬಂಧಪಟ್ಟ ಎಕ್ಸ್ ರೇಯನ್ನು ನಾನು ಹಾಜರುಪಡಿಸಿರುತ್ತೇನೆ . 25-03-2025 ರಂದು ಆ ಬಗ್ಗೆ ನಾನು ಎಕ್ಸ್ ರೇ ತೆಗೆದಿರುತ್ತೇನೆ . ನಾನು ಹೇಳುವ ರೀತಿ ಅರ್ಜಿದಾರರಿಗೆ ಮೂಳೆ ಸರಿಯಾಗಿ ಜೋಡಣೆ ಆಗಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

44% ಅಂಗನ್ಯೂನತೆ ಉಂಟಾಗಿದೆ ಎಂದು ನಾನು ಅರ್ಜಿದಾರರಿಗೆ ಬಲಕಾಲಿಗೆ ಸಂಬಂಧಪಟ್ಟಂತೆ ಮಾತ್ರ ಹೇಳಿರುತೇನೆ. ಇಡೀ ದೇಹಕ್ಕೆ ನಾನು ಅಂಗನ್ಯೂನತೆಯನ್ನು ನಾನು ಹೇಳಿಲ್ಲ . ನಾನು

ಅರ್ಜಿದಾರರಿಗೆ ಕೇಂದ್ರ ಸರ್ಕಾರದ ಗೆಜೆಟೆಡ್ ನೋಟಿಫಿಕೇಶನ್ ಪ್ರಕಾರ ಪರೀಕ್ಷೆ ಮಾಡಿರುತ್ತೇನೆ . stability component ಬಗ್ಗೆ ನಾನು ಅವರು ತಿರುಗಾಡಲು ಸಾಧ್ಯವಿದೆಯೇ, ನಿಂತುಕೊಳ್ಳಲು ಸಾಧ್ಯವಿದೆಯೋ ಮೆಟ್ಟಿಲು, ಹತ್ತಲು ಸಾಧ್ಯವಿದೆಯೋ , ಚಕ್ರಮಟ್ಟಿ ಹಾಕಿ ಕುಳಿತುಕೊಳ್ಳಲು , ಕುಕ್ರು ಕಾಲಿನಲ್ಲಿ ಕುಳಿತುಕೊಳ್ಳಲು ಸಾಧ್ಯವಿದೆಯೇ ಎಂದು ನಾನು ಪರೀಕ್ಷೆ ಮಾಡಿರುತ್ತೇನೆ. ಅದನ್ನು ನಾನು ಪ್ರತ್ಯೇಕವಾಗಿ ನಮೂದು ಮಾಡಿದ್ದೇನೆ .

Mobility component ಬಗ್ಗೆ ನಾನು range of movement and muscle power ಬಗ್ಗೆ ಮಾತ್ರ ಪರೀಕ್ಷೆ ಮಾಡಿರುತ್ತೇನೆ. 2 ಕಾಲುಗಳನ್ನು compare ಮಾಡಿ ನಾವು mobility component ಬಗ್ಗೆ ನಿರ್ಧರಿಸುತ್ತೇವೆ .

Grade-0 = No power , Grade-1= ಮಾಂಸ ಕಂಡ ಅಳ್ಳಾಡುತ್ತದೆ ಆದರೇ ಅದರ ಮೂಮೆಂಟ್ ಇರುವುದಿಲ್ಲ , Grade -2= gravity ಬಂದ ಕಡೆ ಸಂಬಂಧಪಟ್ಟ ಲಿಂಬ್ ನ್ನು ಮೂವ್ ಮಾಡುವುದು, ನಾವು ನೇರವಾಗಿ ಅಳ್ಳಾಡಿಸಲು ಸಾಧ್ಯವಿಲ್ಲ ಆದರೇ ಮತ್ತೊಂದು ಬದಿಯಿಂದ ಬೇರೆ ರೀತಿಯಲ್ಲಿ ಮೂಮೆಂಟ್ ಮಾಡುವುದು , Grade 3= able to do against gravity. Grade 4 = some resistance , Grade -5= full resistance .

Grade -5 ಬಗ್ಗೆ ಟೆಸ್ಟ್ ಮಾಡಿರುತ್ತೇನೆ . ಆ ಬಗ್ಗೆ ನನ್ನ ದಾಖಲೆಯಲ್ಲಿ ಉಲ್ಲೇಖ ಇದೆ . ನಾನು ಯಾಂತ್ರಿಕವಾಗಿ ಸರ್ಟಿಫಿಕೇಟ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ, ನಾನು ಯಾವುದೇ ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಷ್ಟು ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಳವಡಿಸಿದ ಒಳಸಾದನವನ್ನು ಅಗತ್ಯವಿದ್ದರೇ ಮಾತ್ರ ತೆಗೆಯಬೇಕಾಗುತ್ತದೆ . ಅದನ್ನು ತೆಗೆಯುವ ಅಗತ್ಯತೆ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಷ್ಟು ಹಣ ಖರ್ಚಾಗುವುದಿಲ್ಲ ಎಂದರೆ ನಮ್ಮ ಆಸ್ಪತ್ರೆ ಯಲ್ಲಿ ಅಷ್ಟು ಖರ್ಚು ಆಗುತ್ತದೆ . ಅಪಘಾತವಾದರೇ 60 ವರ್ಷವಾದರೇ ಆರ್ಥರೈಟಿಸ್ ಬರುತ್ತದೆ 40 ರಿಂದ 45 ವರ್ಷ ಆದರೇ ಬರುವುದಿಲ್ಲ . ಅರ್ಜಿದಾರರಿಗೆ ಈಗ ಸಧ್ಯಕ್ಕೆ ಆರ್ಥರೈಟಿಸ್ ಇರುವುದಿಲ್ಲ . ಗಾಯವಾದ 10 ವರ್ಷಗಳ ಒಳಗಾಗಿ ಆರ್ಥರೈಟಿಸ್ ಬರುವ ಸಾಧ್ಯತೆ ಇದೆ . ಅರ್ಜಿದಾರರಿಗೆ ಆರ್ಥರೈಟಿಸ್ ಬರುವ ಸಾಧ್ಯತೆ ಇದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ರೀತಿಯ ಸರ್ಜರಿಯ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತ ಸರ್ಜರಿಗೆ

ನಾನು ಹೇಳುವಂತ ಖರ್ಚು ಆಗುವುದಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.